ಪರಿವಾರ...'

'ಹೂಂ... ಸ್ವಲ್ಪ ಸ್ವಲ್ಪ ನೆನಪಾಗುತ್ತಿದೆ' ನಾನು ಜ್ಞಾಪಿಸಿಕೊಳ್ಳುತ್ತಾ ಹೇಳಿದೆ, 'ಅವರು ತುಂಬಾ ಉದ್ಧಟರಾಗಿದ್ದರಲ್ಲ...'

'ಈಗ ಹಾಗಿಲ್ಲ... ಕಾಲ ಅವರನ್ನು ಮೃದುಗೊಳಿಸಿದೆ. ಅವರು ಈಗ ನನ್ನನ್ನು ಸ್ನೇಹದಿಂದ ಭೇಟಿಯಾಗುತ್ತಾರೆ. ಆಗ ನಿನ್ನ ಮತ್ತು ವಿಲಿಯಮ್ ಬಗ್ಗೆ ಖಂಡಿತ ವಿಚಾರಿಸುತ್ತಾರೆ.'

'ಈಗ ಅವರೆಲ್ಲರೂ ನಡುವಯಸ್ಸಿಗೆ ಬಂದಿರಬೇಕು...'

'ಗೊತ್ತಿಲ್ಲ. ನನಗೆ ನನ್ನೆದುರು ಹುಟ್ಟಿದ, ಬೆಳೆದ ಮಕ್ಕಳೆಲ್ಲರೂ ಸದಾ ಮಕ್ಕಳಾಗಿಯೇ ಕಾಣಿಸುತ್ತಾರೆ. ಹಾಂ, ಅವರಲ್ಲಿ ಕೊನೆಯವಳಿಗೆ ಇನ್ನೂ ಮದುವೆಯಾಗಿಲ್ಲ'.

'ಏಕೆ?'

'ಗೊತ್ತಿಲ್ಲ. ಬಹುಶಃ ಯಾರೂ ಸಿಕ್ಕಿಲ್ಲವೇನೋ...' ಅಮ್ಮ ನನ್ನ ಕಾಲದಲ್ಲಿ ಜನಿಸಿದ ಹಾಗೂ ನಮ್ಮ ಪರಿವಾರದೊಂದಿಗೆ ಸ್ನೇಹ–ಸಂಬಂಧದಿಂದಿದ್ದ ಇನ್ನಷ್ಟು ಹುಡುಗಿಯರ ಬಗ್ಗೆ ತಿಳಿಸಲಾರಂಭಿಸಿದಳು.

'ಬ್ಲೇಯರ್ ಪರಿವಾರದ ಜಾನ್ ನಿನ್ನ ಸ್ನೇಹಿತನಾಗಿದ್ದ... ಅವನ ತಂಗಿ ಕಳೆದ ವರ್ಷ ವಿಧವೆಯಾದಳು. ಅವಳ ಗಂಡ ಅಫ್ಘಾನಿಸ್ತಾನದ ಸೈನ್ಯದಲ್ಲಿದ್ದ. ಪಾಪ, ಅವನು ಒಂದು ಎನ್‌ಕೌಂಟರ್‌ನಲ್ಲಿ ಸತ್ತ!'

'ಓಹ್!' ನನ್ನ ಬಾಯಿಯಿಂದ ಅನಾಯಾಸವಾಗಿ ಚೀತ್ಕಾರ ಬಂತು.

ಅಮ್ಮ ಹೇಳಿದಳು, 'ಇಂಗ್ಲೆಂಡ್ ಬೇರೆ ದೇಶಗಳೊಂದಿಗೆ ವೈರತ್ವ ಬೆಳೆಸಿಕೊಂಡು ನಮ್ಮ ಬಹಳಷ್ಟು ಯುವಕರನ್ನು ಯುದ್ಧದಲ್ಲಿ ಕೊಂದಿದೆ. ಸ್ಕಾಟ್ಲೆಂಡ್, ಐರ್ಲೆಂಡ್‌ನಂತೆ ಇಂಗ್ಲೆಂಡಿನ ಸಹವಾಸವನ್ನು ತ್ಯಜಿಸಿ ಒಂದು ಸ್ವತಂತ್ರ ರಾಷ್ಟ್ರವಾಗಿ ತನ್ನನ್ನು ನಿರ್ಮಿಸಿಕೊಳ್ಳಬೇಕು. ಇಂಗ್ಲೆಂಡ್ ಜಗತ್ತಿನ ಅನೇಕ ದೇಶಗಳಲ್ಲಿ ತನ್ನ ಕಾಲೊನಿಗಳನ್ನು ನಿರ್ಮಿಸಿ, ಅಲ್ಲಿ ಬಲಾತ್ಕಾರದ ಆಡಳಿತ ನಡೆಸಿ ಅನೇಕ ದೇಶಗಳ ನಾಗರಿಕರ ಮನಸ್ಸಿನಲ್ಲಿ ತನ್ನ ಬಗ್ಗೆ ವಿಷವನ್ನು ಬಿತ್ತಿದೆ, ಅವುಗಳ ಜೊತೆಯಲ್ಲಿರುವುದರಿಂದ ಜಗತ್ತು ನಮ್ಮನ್ನು ಜಿಗುಪ್ಸೆಯಿಂದ ನೋಡುತ್ತದೆ. ಸ್ವಲ್ಪ ಯೋಚಿಸು. ಇಂಡಿಯಾ... ಅಷ್ಟು ವಿಶಾಲ ಮತ್ತು ಪ್ರಾಚೀನ ದೇಶದಲ್ಲೂ ಅವರು ಅಷ್ಟು ವರ್ಷಗಳವರೆಗೆ ಆಡಳಿತವನ್ನು ನಡೆಸಿದರು.'

'ಅಮ್ಮಾ, ಆ ಕಾರಣದಿಂದಲೇ ಇಂದು ನಾವಿಲ್ಲಿರುವುದು. ನಮ್ಮ ಮುತ್ತಜ್ಜಿ ಇಂಡಿಯಾದಿಂದ ಬಂದಿದ್ದರು ಎಂಬುದನ್ನು ಮರೆಯಬೇಡ. ಅವರು ಅಜ್ಜನಿಗೆ ಜನ್ಮ ಕೊಟ್ಟರು, ಅಜ್ಜನ ಕೃಪೆಯಿಂದಾಗಿ ನಾವೆಲ್ಲರೂ ಇಲ್ಲಿದ್ದೇವೆ.'

ಅಮ್ಮ ನನ್ನ ಮಾತಿನೆಡೆಗೆ ಗಮನಕೊಡದೆ ತನ್ನ ಮಾತನ್ನು ಮುಂದುವರೆಸಿದಳು, 'ಜಾನ್ ತಂಗಿಗೆ ಮೂವರು ಟೀನ್‌ಏಜರ್ ಮಕ್ಕಳಿದ್ದಾರೆ. ಪಾಪ, ಅವಳು ಅವರನ್ನು ಒಂಟಿಯಾಗಿ ಪಾಲನೆ ಮಾಡುತ್ತಿದ್ದಾಳೆ.'

'ಓಹ್!' ನಾನು ಮತ್ತೆ ವಿಷಾದವನ್ನು ವ್ಯಕ್ತಪಡಿಸಿದೆ.

'ಆ ಟೋಮಿಲ್ಸನ್ ಪರಿವಾರವಿತ್ತಲ್ಲ, ಅವರ ಹಿರಿಯ ಮಗಳ ಡಿವೋರ್ಸ್ ಆಯ್ತು. ಈಗ ಅವಳು ಒಂಟಿಯಾಗಿದ್ದಾಳೆ...'

'ಅಮ್ಮಾ, ಇದನ್ನೆಲ್ಲಾ ನನಗೇಕೆ ಹೇಳುತ್ತಿದ್ದೀಯ?' ನಾನು ವ್ಯಂಗ್ಯವಾಡಿದೆ.

'ನೀನು ಬಯಸಿದರೆ, ನಾನು ನಿನ್ನನ್ನು ಇವರೊಂದಿಗೆ ಭೇಟಿ ಮಾಡಿಸುತ್ತೇನೆ' ಅಮ್ಮ ಅರ್ಥಪೂರ್ಣವಾಗಿ ಮುಗುಳ್ನಕ್ಕಳು.

'ಇನ್ನು ಬೇರೆ ಮಹಿಳೆಯರು ಬೇಡ, ನಾನು ಒಂಟಿಯಾಗಿಯೇ ಸುಖವಾಗಿದ್ದೇನೆ. ಹೆಂಗಸರು ನನಗೆ ಆಗಿಬರುವವರಲ್ಲ. ನಾನು ಹೆಣ್ಣಿನ ಚರಿತ್ರೆಯನ್ನು ಅರಿತುಕೊಳ್ಳಲು ಅಸಮರ್ಥನಾಗಿದ್ದೇನೆ' ಎಂದು ನೀನಾಳೊಂದಿಗೆ ಬ್ರೇಕಪ್ ಆದ ನಂತರ ಯೋಚಿಸಿದ್ದೆ. ಆದರೆ ಕ್ರಮೇಣ ನನ್ನ ಮನಸ್ಸಿನ ಗಾಯಗಳು ವಾಸಿಯಾಗುತ್ತಾ ಬಂದವು; ಈಗ ನಾನು ಮಾನಸಿಕವಾಗಿ ಮೂರನೆಯ ಪಾಳಿಯಲ್ಲಿ ಆಡಲು ಸಿದ್ಧನಾಗಿದ್ದೆ. ಹೀಗಾಗಿ ಅಮ್ಮನಿಗೆ ಹೇಳಿದೆ, 'ಮುಂದಿನ ಸಲ...'

'ನೀನು ಇಲ್ಲಿಗೆ ಮತ್ತೆ ಯಾವಾಗ ಬರ್ತೀಯ?' ಅಮ್ಮ ಕೇಳಿದಳು.

'ಅಕ್ಟೋಬರ್‌ನಲ್ಲಿ ಒಂದು ವಾರದ ಆಟಮ್ ಬ್ರೇಕ್ ಇರುತ್ತೆ, ಆಗ ಬರ್ತೀನಿ.'

'ಸರಿ. ನಾನು ಆ ಹುಡುಗಿಯರೊಂದಿಗೆ ಮಾತಾಡಿರ್ತೀನಿ. ನಿನ್ನನ್ನು ಭೇಟಿಯಾಗಲು ಒಬ್ಬರಾದರೂ ಇಷ್ಟಪಡಬಹುದು'.

'ಹುಡುಗಿಯರು?' ನಾನು ಮುಗುಳ್ನಕ್ಕೆ.

ನಾನು ನನ್ನ ಯೋಚನೆಗಳಲ್ಲಿ ಮಗ್ನನಾಗಿದ್ದೆ, ಹೀಗಾಗಿ ಮೊಬೈಲ್ ರಿಂಗಾದದ್ದು ಗೊತ್ತಾಗಲೇ ಇಲ್ಲ. ಇಷ್ಟು ರಾತ್ರಿಯಲ್ಲಿ ನನಗ್ಯಾರು ಫೋನ್ ಮಾಡ್ತಿದ್ದಾರೆ? ನಾನು ರಿಂಗಾಗುತ್ತಿದ್ದ ಮೊಬೈಲನ್ನು ನನ್ನ ಜಾಕೆಟ್‌ನಿಂದ ಹೊರತೆಗೆದು ನೋಡಿದೆ; ಅಮ್ಮ ಫೋನ್ ಮಾಡಿದ್ದಳು. ವಾಚ್ ನೋಡಿದೆ; ರಾತ್ರಿಯ ಹನ್ನೆರಡು ಗಂಟೆಯಾಗಿತ್ತು. ಡೆನ್ಮಾರ್ಕ್‌ಗಿಂತ ಸ್ಕಾಟ್ಲೆಂಡ್ ಒಂದು ಗಂಟೆ ಹಿಂದಿದೆ, ಅಲ್ಲಿನ್ನೂ ಹನ್ನೊಂದು ಗಂಟೆಯಾಗಿರಬೇಕು.

'ಪಾಲ್'

'ಅಮ್ಮಾ, ನೀನಿನ್ನೂ ಮಲಗಿಲ್ಲವೇ?'

'ಮಲಗಲು ಹೋಗ್ತಿದ್ದೇನೆ, ನಿನಗೆ ಮೊದಲು ಫೋನ್ ಮಾಡಲು ಯೋಚಿಸಿದೆ. ನಿನ್ನ ಪ್ರಯಾಣ ಹೇಗೆ ಸಾಗುತ್ತಿದೆ?'

'ಚೆನ್ನಾಗಿದೆ. ಸುತ್ತಮುತ್ತ ದಟ್ಟ ಅಂಧಕಾರವಿದೆ. ಎಲ್ಲೆಲ್ಲೂ ಮೌನವಿದೆ. ಹೊಲ–ಗದ್ದೆಗಳು, ಕಾಡು, ಕೆರೆ, ಝರಿಗಳ ನಡುವೆಯಿಂದ ಸಾಗುತ್ತಿದ್ದೇನೆ'.

'ಓಹ್ ಪಾಲ್... ನೀನು ಸುರಕ್ಷಿತವಾಗಿದ್ದೀಯಲ್ಲ...?'

'ಗೊತ್ತಿಲ್ಲ ಅಮ್ಮ... ನನ್ನ ಬ್ಯಾಗ್ ಸಹ ಕಳ್ಳತನವಾಯ್ತು. ನನ್ನ ಮೊಬೈಲ್ ಚಾರ್ಜರ್, ತಿಂಡಿ–ತಿನಿಸು ಎಲ್ಲವೂ ಅದರಲ್ಲಿತ್ತು.'

'ಓಹ್!'

'ಹೇಗಾದರೂ ಮಾಡಿ ನಾನು ದೇವಸ್ಥಾನದವರೆಗೆ ಹೋಗಲು ಪ್ರಾರ್ಥಿಸು.'

ಅಮ್ಮ ಭಾವುಕಳಾಗಿ ಆಶೀರ್ವದಿಸಿದಳು, 'ಓಹ್ ಪಾಲ್, ನೀನು ನಿನ್ನ ಅಭಿಯಾನದಲ್ಲಿ ಖಂಡಿತ ಯಶಸ್ಸನ್ನು ಪಡೆಯುವೆ. ನಾನಿಂದು ಚರ್ಚ್‌ನಲ್ಲಿ ನಿನಗಾಗಿ ವಿಶೇಷ ಸರ್ವೀಸ್ ಇಟ್ಟುಕೊಂಡಿದ್ದೆ. ನೀನು ನಿನ್ನ ಯಾತ್ರೆಯಲ್ಲಿ ಯಶಸ್ಸನ್ನು ಹೊಂದು ಎಂದು ನಾವೆಲ್ಲರೂ ಪ್ರಾರ್ಥಿಸಿದ್ದೇವೆ...'

'ಅಮ್ಮಾ, ಈಗ ನಿನ್ನೊಂದಿಗೆ ಹೆಚ್ಚು ಮಾತನಾಡಲಾರೆ. ನಾನು ನನ್ನ ಮೊಬೈಲ್ ಬ್ಯಾಟರಿಯನ್ನು ಎಮರ್ಜೆನ್ಸಿಗಾಗಿ ಉಳಿಸಿಟ್ಟುಕೊಳ್ಳಬೇಕಿದೆ.'

ಅಮ್ಮ ಸರಸರನೆ ಹೇಳಿದಳು, 'ಪಾಲ್, ಹೆದರಬೇಡ. ಏಸು ನಿನ್ನೊಂದಿಗಿದ್ದಾರೆ. ಅವರು ನಿನ್ನನ್ನು ರಕ್ಷಿಸುತ್ತಿದ್ದಾರೆ... ಅವರು ನಿನ್ನನ್ನು ಖಂಡಿತ ದೇವಸ್ಥಾನಕ್ಕೆ ತಲುಪಿಸುತ್ತಾರೆ.'

ಬೆಥಲೇಹಮ್‌ನ ಜೀಸಸ್ ಕ್ರೈಸ್ಟ್ ನನ್ನನ್ನು ಭಾರತದ ದೇವಸ್ಥಾನಕ್ಕೆ ತಲುಪಿಸುತ್ತಾರೆ. ನನ್ನ ಅಮ್ಮ ಸಹ... ನಾನು ನಕ್ಕೆ. ಶೂನ್ಯದಲ್ಲಿ ನನ್ನ ನಗು ಪ್ರತಿಧ್ವನಿಸಿತು... ಆ ಫಕೀರ ನನಗಿಂತ ಹೆಚ್ಚು ಶ್ರೀಮಂತ

ಮರುದಿನ ಅಮ್ಮ ತನ್ನ ಕಾರ್ಯಕ್ರಮದಲ್ಲಿ ವ್ಯಸ್ತಳಾಗಿದ್ದಳು. ನಾನು ಪ್ರತಿ ಬಾರಿಯೂ ನನ್ನ ಮೂಲ ನಗರ ಗ್ಲಾಸ್ಗೋಗೆ ಬಂದಾಗ ಮಾಡುವುದೆಲ್ಲವನ್ನೂ ಮಾಡಿದೆ. ಮೊದಲು ಬೆಳ್ಳಂಬೆಳಿಗ್ಗೆ ನನ್ನ ತಂದೆಯ ಅಂತಿಮ ವಿಶ್ರಾಮ ಸ್ಥಳ, ಈಸ್ಟವುಡ್ ರುದ್ರಭೂಮಿಗೆ ಹೋದೆ. ಅಲ್ಲಿ ಐವತ್ತು ಸಾವಿರ ಶವಗಳನ್ನು ಹೂಳಲಾಗಿತ್ತು. ನಾನು ನೇರವಾಗಿ ನನ್ನ ತಂದೆಯ ಸಮಾಧಿಯ ಬಳಿಗೆ ಹೋದೆ.

ಅಪ್ಪನನ್ನು ಹೂಳಿದ ಎರಡು ದಿನಗಳ ನಂತರ ನಾನು, ವಿಲಿಯಮ್, ಅಲ್ಬರ್ಟ್ ಮತ್ತು ಜೂಲಿಯಾ ಇಲ್ಲಿಗೆ ಬಂದಿದ್ದೆವು. ಅಪ್ಪನ ಸಮಾಧಿಯ ಮೇಲೆ ನಾವು ಹುಲ್ಲು ಮತ್ತು ಗಿಡಗಳ ಒಂದು ಸುಂದರ ಕೈತೋಟವನ್ನು ನಿರ್ಮಿಸಿದ್ದೆವು. ಅವರ ಸಮಾಧಿ ಕಲ್ಲಿನ ಮೇಲೆ ಸ್ಮೃತಿ ಬರಹವನ್ನು ಬರೆಸಿದ್ದೆವು.

ಇಲ್ಲಿ ಡೇನಿಯಲ್ ಸ್ಕಾಟ್ ಎಂಬ ಮಹಾನ್ ವ್ಯಕ್ತಿಗಳು ಮಲಗಿದ್ದಾರೆ. (1935–2011)

ಪ್ರತಿಯೊಂದು ಜೀವನದ ಅಂತ್ಯ ಒಂದು ಹೊಸ ಆರಂಭವಾಗಿದೆ. ಹುಲ್ಲು ಬೆಳೆದು ಸ್ವಲ್ಪ ದಟ್ಟವಾದಾಗ ಹಾಗೂ ಹೂವುಗಳು ಅರಳುವಾಗ ನಾವು ಅಮ್ಮನನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದೆವು. ಅಮ್ಮ ತನ್ನ ನಿಸ್ತೇಜ ಕಣ್ಣುಗಳಿಂದ ತೋಟವನ್ನು ನೋಡಿದಳು, ಸ್ಮೃತಿ ಬರಹವನ್ನು ಓದಿದಳು, ನಂತರ ಭಾವವಿಹ್ವಲಳಾಗಿ ನನ್ನ ಹೆಗಲ ಮೇಲೆ ತಲೆಯಿಟ್ಟು ಬಿಕ್ಕಳಿಸಿದ್ದಳು, ನಾನು ಸಾಕಷ್ಟು ಹೊತ್ತು ಅಮ್ಮನನ್ನು ಸ್ನೇಹದಿಂದ ನೇವರಿಸುತ್ತಿದ್ದೆ.

ಕೈತೋಟ ಈಗ ಒಣಗಿತ್ತು. ಕೈತೋಟ ಹಾಳಾಗದಂತೆ ನೋಡಿಕೊಳ್ಳುವಷ್ಟು ಸಮಯ ಈಗ ನಮ್ಮ ಬಳಿ ಯಾರಿಗೂ ಇರಲಿಲ್ಲ. ನಾವಿಲ್ಲಿಗೆ ಬಂದು ಸಮಾಧಿಯ ಮೇಲೆ ಮೂರ್ನಾಲ್ಕು ಹೂವುಗಳನ್ನು ಹಾಕುತ್ತೇವೆ. ನಾನು ಮೊಣಕಾಲೂರಿ ಕೂತು ಅಪ್ಪನ ಸಮಾಧಿಗೆ ಹೂವುಗಳನ್ನು ಅರ್ಪಿಸಿದೆ. ಕಣ್ಣುಗಳನ್ನು ಮುಚ್ಚಿ ಅವರಿಗೆ ಮನಸ್ಸಿನಲ್ಲಿ ಧನ್ಯವಾದಗಳನ್ನು ಹೇಳಿದೆ.

(ಸಶೇಷ)